8. ಸಭೆಯ ಮುಂದಿಡಲಾಗುವ ಕಾಗದ ಪತ್ರ

ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ:– ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಪುರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2013ನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

(ಅನುಬಂಧ–3)

9. ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಪುರಸಭೆಗಳು ಮತ್ತು ಕೆಲವು ಇತರ ಕಾನೂನ (ತಿದ್ದುಪಡಿ) ವಿಧೇಯಕ, 2013 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಾಲಚಂದ್ರ ಎಲ್. ಜಾರಕಿಹೋಳಿ (ಮಾನ್ಯ ಪೌರಾಡಳಿತ ಮತ್ತು ಸಾರ್ವಜಕನಿಕ ಉದ್ದಿಮೆಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ 2013ನೇ ಸಾಲಿನ ಕರ್ನಾಟಕ ಪುರಸಭೆಗಳು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು:– ಈ ಬಗ್ಗೆ ಸದನಕ್ಕೆ explain ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) :– ಮಾನ್ಯ ಸಚಿವರೆ, ದಯವಿಟ್ಟು ಈ ಬಗ್ಗೆ ಸದನಕ್ಕೆ ಸ್ವಲ್ಪ explain ಮಾಡಿ. ಕಳೆದ ನಾಲ್ಕು ತಿಂಗಳಿನಿಂದ ರಾಜ್ಯದ ಜನತೆ ಕಾತುರದಿಂದ ಕಾಯುತ್ತಿದ್ದಾರೆ. ನೀವು ಈಗ ಒಂದು ದೊಡ್ಡ ತೀರ್ಮಾನ ಮಾಡುತ್ತಿದ್ದೀರಿ. ಇದನ್ನು ನೀವು correct ಆಗಿ ಮಾಡುತ್ತಿದ್ದೀರೋ ಅಥವಾ ಹೆಚ್ಚು ಕಡಿಮೆ ಮಾಡುತ್ತಿದ್ದೀರೋ? ಶಾಸನದ ಕಂಟ್ರೋಲ್‌ನಲ್ಲಿ ಅಧಿಕಾರಿಗಳು ಇರುತ್ತಾರೋ? ಅಥವಾ ಅವರ ಅಧಿಕಾರ ಶಾಸನಕ್ಕಿಂತ ಮೇಲೆ ಇರುತ್ತದೋ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಕಡೆ ಕಾರ್ಯಾಂಗ ಇದೆ, ನ್ಯಾಯಾಂಗ ಇದೆ, ಶಾಸಕಾಂಗ ಇದೆ ಮತ್ತು ಪತ್ರಿಕಾ ರಂಗ ಇದೆ.